# 1 ರಿಂದ 5 ನೇ ತರಗತಿಗಳಿಗೆ ಬೋಧನಾ ಕಲಿಕಾ ವಿಧಾನ ಮಾರ್ಗಸೂಚಿ (ಕಲಿನಲಿ)

## 2021–2022

## ವಿಷಯ : ಕನ್ನಡ

- **1 ರಿಂದ 5 ನೇ ತರಗತಿಗಳಿಗೆ 10 ದಿನಗಳಿಗೆ ಶಾಲಾ ಸಿದ್ದತಾ ಚಟುವಟಿಕೆಗಳು**
- **1 ರಿಂದ 5 ನೇ ತರಗತಿಗಳಿಗೆ ಶೈಕ್ಷಣಿಕ ಮಾರ್ಗಸೂಚಿ**

**ಸೂಚನೆಗಳು:**

1. ಕೋವಿಡ್ –19 ಹಿನ್ನೆಲೆಯಲ್ಲಿ ಭೌತಿಕ ತರಗತಿಗಳು ಆರಂಭವಾಗಲು ವಿಳಂಬವಾಗಿದ್ದು, ಮಕ್ಕಳ ಕಲಿಕೆಯಲ್ಲಾದ ಕಲಿಕಾ ಅಂತರವನ್ನು ಗಮನಿಸಿ ಲಭ್ಯವಿರುವ ಅವಧಿಗಳ ಆಧಾರದ ಮೇಲೆ ಕಲಿಕಾ ಫಲಗಳನ್ನು ನಿಗದಿಪಡಿಸಲಾಗಿದೆ.
2. ಭೌತಿಕವಾಗಿ ತರಗತಿಗಳು ಆರಂಭವಾದ ಮೊದಲ ಹತ್ತು ದಿನಗಳು ಮಕ್ಕಳು ಶಾಲಾ ವಾತಾವರಣಕ್ಕೆ ಹೊಂದಿಕೆಯಾಗಲು ವಿವಿಧ ರೀತಿಯ ಶಾಲಾ ಸಿದ್ಧತಾ ಚಟುವಟಿಕೆಗಳನ್ನು ಮಾಡಿಸುವುದು. ಇದಕ್ಕಾಗಿ ಚಟುವಟಿಕೆಗಳ ಪಟ್ಟಿಯನ್ನು ನೀಡಲಾಗಿದ್ದು, ಶಿಕ್ಷಕರು ಅವುಗಳಲ್ಲಿ ತಮ್ಮ ತರಗತಿಗೆ ಅನುಕೂಲವಾಗುವಂತಹ ಅಥವಾ ಇತರೆ ಯಾವುದೇ ಪೂರಕ ಚಟುವಟಿಕೆಗಳನ್ನು ಮಾಡಿಸುವುದು. ಎಲ್ಲಾ ಮಕ್ಕಳು ಭಾಗವಹಿಸುವಂತೆ ಪ್ರೇರೇಪಿಸುವುದು.
3. 11ನೇ ದಿನದಿಂದ 40ನೇ ದಿನದವರೆಗೆ , 41ನೇ ದಿನದಿಂದ 90ನೇ ದಿನದವರೆಗೆ ಮತ್ತು 91ನೇ ದಿನದಿಂದ ನಿರೀಕ್ಷಿತ ಕಲಿಕಾ ಫಲಗಳನ್ನು ಗಳಿಸಲು ದಿ: 22/10/2021ರ ಸುತ್ತೋಲೆಯ ಮಾರ್ಗಸೂಚಿಯಂತೆ ಕಲಿಕಾ ಪ್ರಕ್ರಿಯೆ ನಡೆಸುವುದು.
4. ಕಲಿಕಾ ಪ್ರಕ್ರಿಯೆಯಲ್ಲಿರುವ ಚಟುವಟಿಕೆಗಳನ್ನು ಕಲಿಕಾಂಶ ಹಂತ, ಅಭ್ಯಾಸ ಹಂತ, ಹಾಗೂ ಮೌಲ್ಯಮಾಪನ ಹಂತಗಳು ಕ್ರಮವಾಗಿ ಬರುವಂತೆ ಆಯೋಜಿಸುವುದು.
5. ಸುತ್ತೋಲೆಯಲ್ಲಿ ಸೂಚಿಸಿರುವ ಚಟುವಟಿಕೆಗಳು ಸಲಹಾತ್ಮಕವಾಗಿದ್ದು, ಶಿಕ್ಷಕರು ತಮ್ಮ ತರಗತಿ/ಸನ್ನಿವೇಶಕ್ಕನುಗುಣವಾಗಿ ಸ್ವತಃ ಚಟುವಟಿಕೆಗಳನ್ನು ರೂಪಿಸಿ ಬಳಸಿಕೊಳ್ಳಬಹುದು.

# 10 ದಿನಗಳ ಶಾಲಾ ಸಿದ್ಧತಾ ಚಟುವಟಿಕೆಗಳು

ವಿಷಯ: ಪ್ರಥಮ ಭಾಷೆ ಕನ್ನಡ (ಕಲಿನಲಿ) ತರಗತಿ – 1 ರಿಂದ 5

| ಕ್ರ.ಸಂ. | ಚಟುವಟಿಕೆಗಳ ಹೆಸರು | ಕಲಿಕಾ ಪ್ರಕ್ರಿಯೆ | ಆಕರ ಸಂಪನ್ಮೂಲಗಳು |
|---|---|---|---|
| 1 | ಹಾಡು | ಮಕ್ಕಳನ್ನು ಒಟ್ಟಿಗೆ ಸೇರಿಸಿ ಅಭಿನಯದೊಂದಿಗೆ ಹಾಡನ್ನು ಹೇಳಿಸುವುದು (ಸಾಮೂಹಿಕ/ಗುಂಪಿನಲ್ಲಿ/ವೈಯಕ್ತಿಕವಾಗಿ) | • ಪಠ್ಯ ಪುಸ್ತಕಗಳು<br>• ಕಥಾ ಪುಸ್ತಕಗಳು<br>• ಗ್ರಂಥಾಲಯ ಪುಸ್ತಕಗಳು<br>• ಲಭ್ಯವಿದ್ದಲ್ಲಿ ನಲಿ–ಕಲಿ ಕಾರ್ಡ್‌ಗಳು<br>• ರೇಡಿಯೋ ಮತ್ತು ದೂರದರ್ಶನ ಪಾಠಗಳು<br>• ಯೂಟ್ಯೂಬ್ ಇತ್ಯಾದಿ ಅಂತರ್ಜಾಲ ಸಂಪನ್ಮೂಲಗಳು<br>• ಸ್ಥಳೀಯ ಸಂಪನ್ಮೂಲಗಳು, ಇತ್ಯಾದಿ |
| 2 | ಭಾಷಾ ಆಟಗಳು/ಇತರೆ ಒಳಾಂಗಣ ಆಟಗಳು | ಮಕ್ಕಳಿಗೆ ಆಟದ ನಿಯಮಗಳನ್ನು ಮನವರಿಕೆ ಮಾಡಿಸಿ ನಂತರ ನಿಯಮಾನುಸಾರ ಆಟವನ್ನು ಆಡಿಸುವುದು. (ಪದಗಳ ಅಂತ್ಯಾಕ್ಷರಿ ಆಟ) | |
| 3 | ಕ್ರಾಫ್ಟ್ (ಬಣ್ಣ ಹಚ್ಚುವುದು, ಚಿತ್ರಗಳ ರಚನೆ, ಎಲೆಗಳಿಂದ ಆಕೃತಿ ರಚನೆ ಇತ್ಯಾದಿ) | ಆಯ್ಕೆ ಮಾಡಿಕೊಂಡ ಕ್ರಾಫ್ಟ್ ಚಟುವಟಿಕೆಗಳನ್ನು ಮಾಡಿಸುವುದು. (ಅಗತ್ಯ ಸಾಮಗ್ರಿಗಳನ್ನು ಮೊದಲೇ ಸಂಗ್ರಹಿಸಿಟ್ಟುಕೊಳ್ಳುವುದು). ಕ್ರಾಫ್ಟ್ ಚಟುವಟಿಕೆಗಳನ್ನು ಮಕ್ಕಳ ಕೃತಿ ಸಂಪುಟಕ್ಕೆ ಸೇರಿಸುವುದು. | |
| 4 | ನಾಟಕ/ಸಂಭಾಷಣೆ | ನಾಟಕ/ಸಂಭಾಷಣೆಯನ್ನು ಮಾಡಿಸುವ ಮೊದಲು ಮಕ್ಕಳಿಗೆ ಅವರು ನಿರ್ವಹಿಸುವ ಪಾತ್ರದ ಕುರಿತು ಮಾಹಿತಿ/ಮಾರ್ಗದರ್ಶನ ನೀಡುವುದು. ನಂತರ ಮಕ್ಕಳಿಂದ ಚಟುವಟಿಕೆ ಮಾಡಿಸುವುದು. ಎಲ್ಲಾ ಮಕ್ಕಳು ಭಾಗವಹಿಸುವಂತೆ ಗಮನಹರಿಸುವುದು. | |
| 5 | ಕಥೆ | ಶಿಕ್ಷಕರು ಚಿತ್ರ ಸರಣಿ ಪ್ರದರ್ಶಿಸಿ ಕಥೆ ಹೇಳುವುದರ ಮೂಲಕ ಮಕ್ಕಳಿಗೆ ಕಥೆ ಹೇಳುವಂತೆ ಪ್ರೇರೇಪಿಸುವುದು. | |
| 6 | ಒರಿಗಾಮಿ/ಕಾಗದ ಕಲೆ | ವಿವಿಧ ರೀತಿಯ ಹಾಳೆ ಮಡಿಸುವ ಒರಿಗಾಮಿ ಚಟುವಟಿಕೆಗಳನ್ನು ಪ್ರಾತ್ಯಕ್ಷಿಕೆಯೊಂದಿಗೆ ಮಾಡಿಸುವುದು. | |
| 7 | ಆಶುಭಾಷಣ | ಮಕ್ಕಳ ಮಟ್ಟಕ್ಕನುಗುಣವಾಗಿ ಚಿಕ್ಕ ಚಿಕ್ಕ ವಿಷಯಗಳ ಚೀಟಿ ಬರೆದು ಒಂದು ಡಬ್ಬಿಯಲ್ಲಿ ಹಾಕಿ ಮಗು ಅವುಗಳಲ್ಲಿ ಒಂದನ್ನು ಆಯ್ದು ಆ ವಿಷಯ ಕುರಿತು ತನ್ನ ಅಭಿಪ್ರಾಯ ಹೇಳಲು ಅವಕಾಶ ಕಲ್ಪಿಸುವುದು. (ಪಾಸ್ ದ ಬಾಲ್ ಆಟದ ರೀತಿ ಆಡಿಸಬಹುದು) | |
| 8 | ನಾಲಿಗೆ ಸುರುಳಿ ಚಟುವಟಿಕೆಗಳು | ವಿವಿಧ ರೀತಿಯ ನಾಲಿಗೆ ಸುರುಳಿ ಪದಗಳನ್ನು/ವಾಕ್ಯಗಳನ್ನು ಸಂಗ್ರಹಿಸಿ ಮಕ್ಕಳಿಂದ ಅವುಗಳನ್ನು ಹೇಳಿಸುವ ಚಟುವಟಿಕೆ ಮಾಡಿಸುವುದು. ಈ ಚಟುವಟಿಕೆ ಮಾಡುವಾಗ ಯಾವುದೇ ಮಗುವಿಗೆ ಅಪಹಾಸ್ಯವಾಗದಂತೆ ಎಚ್ಚರವಹಿಸುವುದು ಹಾಗೂ ಮನರಂಜನೆಗಾಗಿ ಎಂಬುದನ್ನು ಮನವರಿಕೆ ಮಾಡುವುದು. | |
| 9 | ಮೂಕಾಭಿನಯ/ಅಣುಕು ನುಡಿ | ಮಕ್ಕಳಿಂದ ವಿವಿಧ ಪ್ರಾಣಿ, ಪಕ್ಷಿ, ವಾಹನ, ಇತ್ಯಾದಿ ಧ್ವನಿಗಳ ಅಣುಕು ನುಡಿ ಮಾಡಿಸುವಂತೆ ಪ್ರೇರೇಪಿಸುವುದು. | |
| 10 | ರೇಖಾಭ್ಯಾಸ/ಅಕ್ಷರಾಭ್ಯಾಸ/ ಪದಗಳ ರಚನೆ ಅಭ್ಯಾಸ | ಮಕ್ಕಳಿಂದ ರೇಖಾಭ್ಯಾಸ ಅಕ್ಷರಾಭ್ಯಾಸ ಚಟುವಟಿಕೆ ಮಾಡಿಸಲು ಪಠ್ಯಪುಸ್ತಕ/ಅಭ್ಯಾಸದ ಹಾಳೆಗಳನ್ನು ಬಳಸಿಕೊಳ್ಳುವುದು. ಮಕ್ಕಳಿಗೆ ಬರೆಯುವ ಕ್ರಮ ಕುರಿತು ಮಾರ್ಗದರ್ಶನ ಮಾಡುವುದು. | |

# ಕಲಿಕಾ ಫಲಗಳು

ವಿಷಯ: ಪ್ರಥಮ ಭಾಷೆ ಕನ್ನಡ (ಕಲಿನಲಿ) 2021–22 ತರಗತಿ – 1

| ಕ್ರ.ಸಂ. | ಕಲಿಕಾ ಫಲಗಳು |
|---|---|
| 1 | ಕನ್ನಡದಲ್ಲಿ ಪದ್ಯಗಳನ್ನು ಹಾಡುವರು ಮತ್ತು ಕಥೆಗಳನ್ನು ನಿರೂಪಣೆ ಮಾಡುವರು. |
| 2 | ಅಕ್ಷರಗಳ ಶಬ್ಧಗಳನ್ನು ಗುರುತಿಸುವರು ಮತ್ತು ಸಂತಸದಿಂದ ಪದಗಳ ರಚನೆ ಮಾಡುವರು. |
| 3 | ಪುಸ್ತಕಗಳಲ್ಲಿ, ತರಗತಿ ಗೋಡೆಗಳ ಮೇಲೆ ಹಾಗೂ ಸೂಚನಾ ಫಲಕಗಳಲ್ಲಿನ ಚಿತ್ರಗಳಲ್ಲಿ ಮುದ್ರಿತವಾದ ಸಾಹಿತ್ಯವನ್ನು ಓದುವರು. |
| 4 | ಕಥೆಗಳಿಗೆ ಪ್ರಶ್ನೆಗಳನ್ನು ಕೇಳುವರು ಮತ್ತು ಸರಳ ಪ್ರಶ್ನೆಗಳಿಗೆ ಉತ್ತರಿಸುವರು. |
| 5 | ಮಾರ್ಗದರ್ಶಿತ ಬರವಣಿಗೆಯನ್ನು ಕಲಿಯುವರು. |

| ಕ್ರ.ಸಂ. | ಶೀರ್ಷಿಕೆ/ಕಲಿಕಾಂಶ | ಕಲಿಕಾ ಪ್ರಕ್ರಿಯೆ | ಸಾಧಿಸಬಹುದಾದ ಕಲಿಕಾ ಫಲ |
|---|---|---|---|
| 1 | 1. ವಂದನೆ (ಪದ್ಯ)<br>2. ಸಹಕಾರ<br>3. ಊಟದ ಆಟ (ಪದ್ಯ)<br>4. ಹೂದೋಟ<br>6. ಶಾಲೆಗೆ ಹೋಗುವೆ (ಪದ್ಯ) | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯ/ಕಥೆಗಳನ್ನು ಬಳಸಿಕೊಳ್ಳುವುದು.<br>➢ ಶಿಶುಗೀತೆ/ ಪ್ರಾಸ ಪದ್ಯ/ ಚಟುಕುಗಳನ್ನು ಸಾಮೂಹಿಕವಾಗಿ/ವೈಯಕ್ತಿಕವಾಗಿ ಅಭ್ಯಾಸ ಮಾಡಿಸುವುದು.<br>➢ ಚಿತ್ರ ಮೂಲಕ ಕಥೆಗಳನ್ನು ಹೇಳುವ ಅಭ್ಯಾಸ ಮಾಡಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br>➢ ಸಾಮೂಹಿಕವಾಗಿ/ವೈಯಕ್ತಿಕವಾಗಿ ಪದ್ಯವನ್ನು ಹಾಡಲು ಪ್ರೇರೇಪಿಸುವುದು.<br>➢ ವಿದ್ಯಾರ್ಥಿಗಳು ಸ್ವಂತವಾಗಿ ಕಥೆಗಳನ್ನು ಹೇಳುವಂತೆ ಪ್ರೋತ್ಸಾಹಿಸುವುದು. | ಕನ್ನಡದಲ್ಲಿ ಪದ್ಯಗಳನ್ನು ಹಾಡುವರು ಮತ್ತು ಕಥೆಗಳನ್ನು ನಿರೂಪಣೆ ಮಾಡುವರು |
| 2 | 8. ಪದ ಓದು ಅಕ್ಷರ ಕಲಿ<br>10. ಗುಣಿತಾಕ್ಷರಗಳು<br>13. ಒತ್ತಕ್ಷರಗಳು | ➢ ಪಠ್ಯ ಪುಸ್ತಕದಲ್ಲಿರುವ ಓದುವ ಚಟುವಟಿಕೆ ಬಳಸಿಕೊಳ್ಳುವುದು.<br>➢ ಚಿತ್ರಗಳು, ಮಿಂಚುಪಟ್ಟಿಗಳನ್ನು ಬಳಸಿ ಅಕ್ಷರ/ಗುಣಿತಾಕ್ಷರ/ಪದಗಳನ್ನು ಹೇಳಿಸುವುದು.<br>➢ ಭಾಷಾ ಆಟ ಆಡಿಸುವುದು.<br>ಒಂದು ಅಕ್ಷರದಿಂದ ಪ್ರಾರಂಭವಾಗುವ ಬೇರೆ ಬೇರೆ ಪದ ಹೇಳಿಸುವುದು. ಉದಾ: ಅ–ಅರ, ಅರಸ, ಅಮರ, ಅಗಸ, ಇತ್ಯಾದಿ).<br>➢ ಪ್ರಾಸಪದ ಗುರುತಿಸುವುದು./ಹೇಳಿಸುವ ಅಭ್ಯಾಸ ಮಾಡಿಸುವುದು.<br>➢ ಸ್ಪಷ್ಟ ಧ್ವನಿ/ಉಚ್ಛಾರಣೆಗಾಗಿ ನಾಲಿಗೆ ಸುರುಳಿಗಳನ್ನು ಉಚ್ಚರಿಸುವ ಅಭ್ಯಾಸ ಮಾಡಿಸುವುದು. | ಅಕ್ಷರಗಳ ಶಬ್ಧಗಳನ್ನು ಗುರುತಿಸುವರು ಮತ್ತು ಸಂತಸದಿಂದ ಪದಗಳ ರಚನೆ ಮಾಡುವರು |
| 3 | 5. ಅಕ್ಷರಾಭ್ಯಾಸ<br>11. ನೆಹರು ಜನ್ಮದಿನ | ➢ ಚಿತ್ರಗಳು, ಮಿಂಚುಪಟ್ಟಿಗಳ ಕಾರ್ಡ್ ಪ್ರದರ್ಶಿಸಿ ಅಕ್ಷರ ಹಾಗೂ ಪದಗಳನ್ನು ಓದುವ ಅಭ್ಯಾಸ ಮಾಡಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಓದುವ ಚಟುವಟಿಕೆಗಳನ್ನು ಮಾಡಿಸುವುದು. | ಪುಸ್ತಕಗಳಲ್ಲಿ, ತರಗತಿ |

| | | | |
|---|---|---|---|
| | 12. ಸೋಮನ ಟಾಮಿ<br>14. ಅಬ್ಬಾಸ್ ಹಣ್ಣಿನ ಅಂಗಡಿ | ➢ ಗೋಡೆ ಬರಹ / ಕಪ್ಪು ಹಲಗೆಯ ಮೇಲೆ ಬರೆದಿರುವ ಪದಗಳು/ ವಾಕ್ಯಗಳನ್ನು ಓದಲು ಪ್ರೋತ್ಸಾಹಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br>➢ ಮುದ್ರಿತ ಅಕ್ಷರ/ಪದಗಳನ್ನು ಓದಲು ಅವಕಾಶ ಕಲ್ಪಿಸುವುದು. | ಗೋಡೆಗಳ ಮೇಲೆ ಹಾಗೂ ಸೂಚನಾ ಫಲಕಗಳಲ್ಲಿನ ಚಿತ್ರಗಳಲ್ಲಿ ಮುದ್ರಿತವಾದ ಸಾಹಿತ್ಯವನ್ನು ಓದುವರು |
| 4 | 7. ಕೋತಿ ಮತ್ತು ಅಳಿಲು<br>9. ಚಂದಿರನೇತಕೆ ಓಡುವನಮ್ಮ (ಪದ್ಯ)<br>15. ಮೊಲದ ಮರಿ (ಪದ್ಯ) | ➢ ಚಿತ್ರಗಳನ್ನು ತೋರಿಸಿ ಸರಳ ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳು ಚರ್ಚೆಯಲ್ಲಿ ಪಾಲ್ಗೊಳಲು ಪ್ರೋತ್ಸಾಹಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಪದ್ಯ/ಗದ್ಯಗಳನ್ನು ಬಳಸಿಕೊಳ್ಳುವುದು.<br>➢ ಕಥೆಯನ್ನು ಆಲಿಸಿದ ನಂತರ ಸರಳ ಪ್ರಶ್ನೆಗಳಿಗೆ ಉತ್ತರಿಸುವಂತೆ ಪ್ರೋತ್ಸಾಹಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br>➢ ಅಭ್ಯಾಸದ ಹಾಳೆಗಳನ್ನು ಬಳಸಿಕೊಳ್ಳುವುದು. | ಕಥೆಗಳಿಗೆ ಪ್ರಶ್ನೆಗಳನ್ನು ಕೇಳುವರು ಮತ್ತು ಸರಳ ಪ್ರಶ್ನೆಗಳಿಗೆ ಉತ್ತರಿಸುವರು |
| 5 | ರೇಖಾಭ್ಯಾಸ<br>5. ಅಕ್ಷರಾಭ್ಯಾಸ<br>16. ಶಂಕರಪ್ಪನ ಮನೆ | ➢ ಬರವಣಿಗೆಯ ಪೂರಕ ರೇಖಾಭ್ಯಾಸ ಮಾಡಿಸುವುದು.<br>➢ ಅಕ್ಷರಗಳನ್ನು/ಪದಗಳನ್ನು ನಕಲು ಮಾಡಿ ಬರೆಯುವಂತೆ ಪ್ರೋತ್ಸಾಹಿಸುವುದು.<br>➢ ಉಕ್ತಲೇಖನ ಬರೆಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಬರವಣಿಗೆಯ ಚಟುವಟಿಕೆಗಳನ್ನು ಅಭ್ಯಾಸ ಮಾಡಿಸುವುದು.<br>➢ ಚಿತ್ರಗಳಿಗೆ ಪದ ಬರೆಯುವ ಚಟುವಟಿಕೆ ಮಾಡಿಸುವುದು.<br>➢ ಪರಿಚಿತ ವಸ್ತುಗಳ, ಪ್ರಾಣಿಗಳ, ಪಕ್ಷಿಗಳ, ಹೂಗಳ, ಹಣ್ಣುಗಳ ಹೆಸರುಗಳನ್ನು ಪಟ್ಟಿ ಮಾಡಿಸುವುದು. | ಮಾರ್ಗದರ್ಶಿತ ಬರವಣಿಗೆಯನ್ನು ಕಲಿಯುವರು |

ವಿಷಯ: ಪ್ರಥಮ ಭಾಷೆ ಕನ್ನಡ (ಕಲಿನಲಿ) ತರಗತಿ – 2

| ಕ್ರ.ಸಂ. | ಕಲಿಕಾ ಫಲಗಳು |
|---|---|
| 1 | ಹಾಡುಗಳು ಮತ್ತು ಕಥೆಗಳನ್ನು ಅರ್ಥ ಮಾಡಿಕೊಂಡು ತಮ್ಮದೇ ಆದ ಪದಗಳಲ್ಲಿ ನಿರೂಪಣೆ ಮಾಡುವರು. |
| 2 | ಅಕ್ಷರಗಳನ್ನು, ಪದಗಳನ್ನು ಮತ್ತು ಸಣ್ಣ ವಾಕ್ಯಗಳನ್ನು ಓದುವರು. |
| 3 | ಕಥೆಗಳ, ಪದ್ಯಗಳ ಮತ್ತು ದಿನನಿತ್ಯದ ಚಟುವಟಿಕೆಗಳ ಮೇಲಿನ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವರು. |
| 4 | ಕಾಲ್ಪನಿಕವಾಗಿ ಕಥೆಗಳನ್ನು ಮತ್ತು ಪದ್ಯಗಳನ್ನು ಹೇಳುವರು. |
| 5 | ಮಾರ್ಗದರ್ಶಿತ ಬರವಣಿಗೆಯನ್ನು ಅಭ್ಯಾಸ ಮಾಡುವರು. |

| ಕ್ರ.ಸಂ. | ಶೀರ್ಷಿಕೆ/ಕಲಿಕಾಂಶ | ಕಲಿಕಾ ಪ್ರಕ್ರಿಯೆ | ಸಾಧಿಸಬಹುದಾದ ಕಲಿಕಾ ಫಲ |
|---|---|---|---|
| 1 | 1. ಬಣ್ಣದ ಹಕ್ಕಿ (ಪದ್ಯ)<br>5. ಹಳ್ಳಿಯ ದಾರಿಯ ಬದಿಯಲಿ(ಪದ್ಯ) | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಸಾಮೂಹಿಕವಾಗಿ/ವೈಯಕ್ತಿಕವಾಗಿ ಪದ್ಯವನ್ನು ಹಾಡಲು ಪ್ರೇರೇಪಿಸುವುದು.<br>➢ ಚಿತ್ರಸಹಿತ ಕಥೆಗಳನ್ನು ಮಕ್ಕಳ ಮಾತುಗಳಲ್ಲಿ ಹೇಳಲು ಪ್ರೋತ್ಸಾಹಿಸುವುದು.<br>➢ ಅಭ್ಯಾಸದ ಹಾಳೆಗಳನ್ನು ಬಳಸಿಕೊಳ್ಳುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಮತ್ತು ವ್ಯಾಕರಣ ಮಾಹಿತಿಯನ್ನು ಅಭ್ಯಾಸ ಮಾಡಿಸುವುದು.<br>➢ ಆಲಿಸಿದ ಕಥೆಗಳನ್ನು ಮಕ್ಕಳು ತಮ್ಮ ಮಾತುಗಳಲ್ಲಿ ಹೇಳಲು ಪ್ರೇರೇಪಿಸುವುದು. | ಹಾಡುಗಳು ಮತ್ತು ಕಥೆಗಳನ್ನು ಅರ್ಥ ಮಾಡಿಕೊಂಡು ತಮ್ಮದೇ ಆದ ಪದಗಳಲ್ಲಿ ನಿರೂಪಣೆ ಮಾಡುವರು. |
| 2 | 2. ಊರಿಗೊಬ್ಬ ರಾಜನಂತೆ (ಪದ್ಯ)<br>3. ಗೆಳೆತನ<br>7. ಅರಿವೇ ಗುರು.<br>16. ಕಾವೇರಿ | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಮಿಂಚುಪಟ್ಟಿ ಬಳಸಿ ಪದಗಳನ್ನು/ವಾಕ್ಯಗಳನ್ನು ಓದಲು ಪ್ರೇರೇಪಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಮತ್ತು ವ್ಯಾಕರಣ ಮಾಹಿತಿಯನ್ನು ಅಭ್ಯಾಸ ಮಾಡಿಸುವುದು.<br>➢ ಚಿಕ್ಕ ಕಥೆಗಳನ್ನು ಓದಲು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಮಕ್ಕಳ ಕಥೆಗಳು, ಮಕ್ಕಳ ಕಥೆ ಪುಸ್ತಕ ಬಳಸಿಕೊಳ್ಳುವುದು.<br>➢ ಭಿತ್ತಿಪತ್ರ, ಸೂಚನಾ ಫಲಕಗಳನ್ನು ಓದಲು ಅವಕಾಶ ಕಲ್ಪಿಸುವುದು.<br>➢ ವೃತ್ತ ಪತ್ರಿಕೆ ಮುಖ್ಯಾಂಶಗಳನ್ನು ಓದುವಂತೆ ಪ್ರೇರೇಪಿಸುವುದು. | ಅಕ್ಷರಗಳನ್ನು, ಪದಗಳನ್ನು ಮತ್ತು ಸಣ್ಣ ವಾಕ್ಯಗಳನ್ನು ಓದುವರು |
| 3 | 6. ಸಂತೆ<br>8. ನನ್ನ ದೇ<br>ವರು (ಪದ್ಯ)<br>11. ಮಂಗಗಳ ಉಪವಾಸ (ಪದ್ಯ)<br>13. ಸರಳತೆ | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ವಿದ್ಯಾರ್ಥಿಗಳೊಂದಿಗೆ ಚರ್ಚೆ ಮಾಡುತ್ತಾ ದೈನಂದಿನ ಚಟುವಟಿಕೆ ಪಟ್ಟಿ ಮಾಡಿಸುವುದು. ವಿದ್ಯಾರ್ಥಿಗಳು ಮುಕ್ತವಾಗಿ ಚರ್ಚಿಸಲು ಅವಕಾಶ ಕಲ್ಪಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು. | ಕಥೆಗಳ, ಪದ್ಯಗಳ ಮತ್ತು ದಿನನಿತ್ಯದ ಚಟುವಟಿಕೆಗಳ ಮೇಲಿನ ತಮ್ಮ |

| | | | |
|---|---|---|---|
| | | ➢ ಸಾಮೂಹಿಕವಾಗಿ/ವೈಯಕ್ತಿಕವಾಗಿ ಪದ್ಯವನ್ನು ಹಾಡಲು ಪ್ರೇರೇಪಿಸುವುದು.<br>➢ ಕಥೆಯನ್ನು ಕೇಳಿದ ನಂತರ ಅಲ್ಲಿಯ ಘಟನೆ/ಸನ್ನಿವೇಶದ ಬಗ್ಗೆ ಚರ್ಚಿಸುವುದು.<br>➢ ಪದ್ಯದ ಸಾರಾಂಶವನ್ನು ಅವರದೇ ಮಾತುಗಳಲ್ಲಿ ಅಭಿವ್ಯಕ್ತಗೊಳಿಸಲು ಅವಕಾಶ ಕಲ್ಪಿಸುವುದು. | ಅಭಿಪ್ರಾಯವನ್ನು ವ್ಯಕ್ತಪಡಿಸುವರು |
| 4 | 5. ಹಳ್ಳಿಯ ದಾರಿಯ ಬದಿಯಲಿ(ಪದ್ಯ)<br>12. ನೇಗಿಲು<br>14. ಕಡಲು (ಪದ್ಯ) | ➢ ಪಠ್ಯ ಪುಸ್ತಕದಲ್ಲಿರುವ ಪದ್ಯ/ಗದ್ಯಗಳನ್ನು ಬಳಸಿಕೊಳ್ಳುವುದು.<br>➢ ಸಾಮೂಹಿಕವಾಗಿ/ವೈಯಕ್ತಿಕವಾಗಿ ಪದ್ಯವನ್ನು ಹಾಡಲು ಪ್ರೇರೇಪಿಸುವುದು.<br>➢ ಒಂದು ಚಿತ್ರ ಪ್ರದರ್ಶಿಸಿ ಕಾಲ್ಪನಿಕವಾಗಿ ಕಥೆ ರಚಿಸಲು ಅವಕಾಶ ಕಲ್ಪಿಸುವುದು.<br>➢ ಒಂದು ವಾಕ್ಯ ಹೇಳಿ ಮುಂದುವರೆಸಿಕೊಂಡು ಹೋಗುವಂತೆ ನಿರ್ದೇಶನ ನೀಡುವ ಮೂಲಕ ಕಾಲ್ಪನಿಕ ಕಥೆ ರಚಿಸಲು ಅವಕಾಶ ನೀಡುವುದು.<br>➢ ಚುಟುಕು/ಶಿಶು ಪ್ರಾಸ ಹೇಳಿಸುವ ಅಭ್ಯಾಸ ಮಾಡಿಸುವುದು. ಸ್ವತಃ ಮಕ್ಕಳೇ ರಚಿಸಲು (ಪ್ರಾಸ ಪದ ಜೋಡಿಸುವ ಮೂಲಕ) ಅವಕಾಶ ನೀಡುವುದು. | ಕಾಲ್ಪನಿಕವಾಗಿ ಕಥೆಗಳನ್ನು ಮತ್ತು ಪದ್ಯಗಳನ್ನು ಹೇಳುವರು. |
| 5 | 4. ಸೂಜಿಯ ಕಥೆ<br>10. ಸತ್ಯವಂತ ಬಾಲಕ<br>9. ಮೂರು ಕಲ್ಲುಗಳು<br>15. ಸಹಬಾಳ್ವೆ<br>17. ತಾಯಿ (ಪದ್ಯ) | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಮಾದರಿಯಂತೆ ಬರೆಯುವುದು. ನಕಲು ಮಾಡಿ ಬರೆಯುವ ಚಟುವಟಿಕೆ ಮಾಡಿಸುವುದು.<br>➢ ಉಕ್ತಲೇಖನ ಚಟುವಟಿಕೆ ಮಾಡಿಸುವುದು.<br>➢ ಸರಳ ಪ್ರಶ್ನೆಗಳಿಗೆ ಉತ್ತರವನ್ನು ಬರೆಯುವ ಚಟುವಟಿಕೆ ಮಾಡಿಸುವುದು.<br>➢ ಪದರಚನೆ ಆಟ, ಆರಂಭ/ಅಂತ್ಯಾಕ್ಷರ ಸೇರಿಸಿ ಪದ ರಚನೆ, ಸ್ವಂತ ವಾಕ್ಯ ರಚನೆ, ಗಾದೆ ಮಾತು ಸಂಗ್ರಹಿಸಿ ಬರೆಯುವ ಚಟುವಟಿಕೆ ಮಾಡಿಸುವುದು. | ಮಾರ್ಗದರ್ಶಿತ ಬರವಣಿಗೆಯನ್ನು ಅಭ್ಯಾಸ ಮಾಡುವರು. |

ವಿಷಯ: ಪ್ರಥಮ ಭಾಷೆ ಕನ್ನಡ (ಕಲಿನಲಿ) ತರಗತಿ – 3

| ಕ್ರ.ಸಂ. | ಕಲಿಕಾ ಫಲಗಳು |
|---|---|
| 1 | ಸ್ವರದ ಏರಿಳಿತದೊಂದಿಗೆ ಮತ್ತು ಹಾವಭಾವದೊಂದಿಗೆ ಪದ್ಯಗಳನ್ನು, ಕಥೆಗಳನ್ನು, ಒಗಟುಗಳನ್ನು ಹೇಳುವರು. |
| 2 | ಕಥೆಗಳಲ್ಲಿನ ಪಾತ್ರಗಳನ್ನು, ಸನ್ನಿವೇಶಗಳನ್ನು ಮತ್ತು ಘಟನೆಗಳನ್ನು ಅರ್ಥ ಮಾಡಿಕೊಳ್ಳುವರು. |
| 3 | ಚರ್ಚೆಗಳಲ್ಲಿ ಭಾಗವಹಿಸಿ ಪರಿಚಿತ ಪರಿಕಲ್ಪನೆಗಳನ್ನು ಸರಳ ವಾಕ್ಯಗಳಲ್ಲಿ ವಿವರಿಸುವರು. |
| 4 | ದಿನನಿತ್ಯ ಜೀವನದ ಸಮಸ್ಯೆಗಳ ಕುರಿತು ಮಾತನಾಡುವರು. |
| 5 | ಲಿಖಿತ ಸಾಹಿತ್ಯ ಕಥೆ, ಪುಸ್ತಕಗಳು, ಪಠ್ಯಪುಸ್ತಕಗಳು ಮತ್ತು ಸೂಚನಾ ಫಲಕಗಳನ್ನು ಓದುವರು. |
| 6 | ಅಕ್ಷರಗಳನ್ನು, ಪದಗಳನ್ನು ಮತ್ತು ವಾಕ್ಯಗಳನ್ನು ಸ್ವತಂತ್ರವಾಗಿ ಬರೆಯುವರು. |

| ಕ್ರ.ಸಂ. | ಶೀರ್ಷಿಕೆ/ಕಲಿಕಾಂಶ | ಕಲಿಕಾ ಪ್ರಕ್ರಿಯೆ | ಸಾಧಿಸಬಹುದಾದ ಕಲಿಕಾ ಫಲ |
|---|---|---|---|
| 1 | 2. ನನ್ನ ಕನಸು<br>12. ಅನಾರೋಗ್ಯದ ಸಿಂಹ (ಪದ್ಯ) | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಪರಿಸರ, ವ್ಯಕ್ತಿ, ವಸ್ತು, ಸನ್ನಿವೇಶ, ಘಟನೆ ಇವುಗಳಿಗೆ ಸಂಬಂಧಿಸಿದಂತೆ ಚಿಕ್ಕ ಚಿಕ್ಕ ವಿಷಯಗಳನ್ನು ನೀಡಿ ಸ್ವರ ಏರಿಳಿತದೊಂದಿಗೆ ಮಾತನಾಡಲು ಅಭ್ಯಾಸ ಮಾಡಿಸುವುದು.<br>➢ ಒಗಟುಗಳನ್ನು ಬಿಡಿಸುವ ಚಟುವಟಿಕೆ ಮಾಡಿಸುವುದು.<br>➢ ಪದ್ಯಗಳನ್ನು ಸಾಮೂಹಿಕವಾಗಿ/ವೈಯಕ್ತಿಕವಾಗಿ ಹಾಡಲು ಪ್ರೇರೇಪಿಸುವುದು.<br>➢ ಅಭ್ಯಾಸದ ಹಾಳೆಗಳನ್ನು ಬಳಸಿಕೊಳ್ಳುವುದು.<br>➢ ಪಠ್ಯ ಪುಸ್ತಕದಲ್ಲಿರುವ ಚಟುವಟಿಕೆಗಳನ್ನು ಅಭ್ಯಾಸ ಮಾಡಿಸುವುದು.<br>➢ ಒಗಟುಗಳನ್ನು ಸಂಗ್ರಹಿಸಲು ತಿಳಿಸುವುದು. | ಸ್ವರದ ಏರಿಳಿತದೊಂದಿಗೆ ಮತ್ತು ಹಾವಭಾವದೊಂದಿಗೆ ಪದ್ಯಗಳನ್ನು, ಕಥೆಗಳನ್ನು, ಒಗಟುಗಳನ್ನು ಹೇಳುವರು |
| 2 | 8. ಸಂಕ್ರಾಂತಿ (ಪದ್ಯ)<br>13. ಹೊಯ್ಸಳ<br>15. ಆಡೋಣ ಬಾ | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಸನ್ನಿವೇಶಗಳನ್ನು ಕಲ್ಪಿಸಿ ತನ್ನ ಕಲ್ಪನೆಯನ್ನು ವಿವರಿಸಲು ಪ್ರೋತ್ಸಾಹಿಸುವುದು.<br>➢ ಚಿತ್ರಕಥೆಗಳನ್ನು ತೋರಿಸಿ ಪ್ರಶ್ನೆಗಳಿಗೆ ಉತ್ತರಿಸುವುದು.<br>➢ ಆಲಿಸಿದ ಕಥೆಗಳನ್ನು ತಮ್ಮ ಮಾತುಗಳಲ್ಲಿ ಅಭಿವ್ಯಕ್ತಿಪಡಿಸುವುದು.<br>➢ ಶಾಲಾ ಸನ್ನಿವೇಶದಲ್ಲಿ ಕಥೆಗಳನ್ನು ಹೇಳಿಸುವುದು.<br>➢ ಅಭ್ಯಾಸದ ಹಾಳೆಗಳನ್ನು ಬಳಸಿಕೊಳ್ಳುವುದು. | ಕಥೆಗಳಲ್ಲಿನ ಪಾತ್ರಗಳನ್ನು, ಸನ್ನಿವೇಶಗಳನ್ನು ಮತ್ತು ಘಟನೆಗಳನ್ನು ಅರ್ಥ |

| | | | |
|---|---|---|---|
| | | | ಮಾಡಿಕೊಳ್ಳುವರು. |
| 3 | 3. ಸ್ವಾತಂತ್ರ್ಯ ದಿನಾಚರಣೆ<br>14. ಕಪ್ಪೆಯ ಹಾಡು (ಪದ್ಯ) | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಪಠ್ಯ ಪುಸ್ತಕದಲ್ಲಿ ನೀಡಿರುವ ಚಿತ್ರವನ್ನು ನೋಡಿ ವಾಕ್ಯಗಳನ್ನು ರಚಿಸುವ ಚಟುವಟಿಕೆ ಮಾಡಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಭಾಷಾಭ್ಯಾಸ ಹಾಗೂ ಸಾಮರ್ಥ್ಯಾಧಾರಿತ ಅಭ್ಯಾಸಗಳನ್ನು ಮಾಡಿಸುವುದು.<br>➢ ನಮ್ಮ ಸುತ್ತಮುತ್ತಲಿನ ಮೂಲಭೂತ ಸೌಕರ್ಯಗಳ ಸಮಸ್ಯೆಗಳ ಬಗ್ಗೆ ಚರ್ಚಿಸಲು ತಿಳಿಸುವುದು.<br>➢ ಶಾಲಾ ಸನ್ನಿವೇಶದಲ್ಲಿ ಪರಿಚಿತ ವಿಷಯಗಳ ಬಗ್ಗೆ ವಿದ್ಯಾರ್ಥಿಗಳು ಚರ್ಚಿಸಲು ತಿಳಿಸುವುದು. | ಚರ್ಚೆಗಳಲ್ಲಿ ಭಾಗವಹಿಸಿ ಪರಿಚಿತ ಪರಿಕಲ್ಪನೆಗಳನ್ನು ಸರಳ ವಾಕ್ಯಗಳಲ್ಲಿ ವಿವರಿಸುವರು |
| 4 | 1. ತುತ್ತೂರಿ (ಪದ್ಯ)<br>7. ಪ್ರಾಮಾಣಿಕ ಬಾಲಕ<br>16. ಮುಳುಗದ ಸೂರ್ಯ (ಪದ್ಯ) | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿರುವ ದೈನಂದಿನ ಸಮಸ್ಯೆಗಳ ಬಗ್ಗೆ ಮುಕ್ತವಾಗಿ ಮಾತನಾಡಲು ಅವಕಾಶ ಕಲ್ಪಿಸುವುದು. ಉದಾ: ಒಳಚರಂಡಿ ವ್ಯವಸ್ಥೆ. ಪರಿಸರ ಮಾಲಿನ್ಯ.<br>➢ ಶಾಲಾ ಸನ್ನಿವೇಶದಲ್ಲಿ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಮಾತನಾಡುವುದು.<br>➢ ಸಣ್ಣ ಸಣ್ಣ ಘಟನೆ, ವಿಷಯಗಳನ್ನು ನೀಡಿ ಆಶುಭಾಷಣ ಸ್ಪರ್ಧೆಯ ಮುಖಾಂತರ ಮಾತನಾಡುವಂತೆ ಪ್ರೇರೇಪಿಸುವುದು. | ದಿನನಿತ್ಯ ಜೀವನದ ಸಮಸ್ಯೆಗಳ ಕುರಿತು ಮಾತನಾಡುವರು. |
| 5 | 5. ಚಿಗುರು<br>9. ಭಗೀರಥ<br>10 ಮೃಗಾಲಯದಲ್ಲಿ ಒಂದು ದಿನ. | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಕರಪತ್ರ, ಭಿತ್ತಿಪತ್ರ, ನಿಯತಕಾಲಿಕೆಗಳು, ಗ್ರಂಥಾಲಯದ ಪುಸ್ತಕಗಳು, ವಾರ್ತಾ ಪತ್ರಿಕೆಗಳು, ಸೂಚನಾ ಫಲಕಗಳು ಇತ್ಯಾದಿಗಳನ್ನು ಓದಿಸುವುದು.<br>➢ ನಿಯತಕಾಲಿಕೆಗಳು, ವಾರ್ತಾ ಪತ್ರಿಕೆಗಳು, ಇವುಗಳಲ್ಲಿ ಬರುವ ಮಕ್ಕಳ ಕಥೆಗಳನ್ನು ಓದಿಸುವುದು.<br>➢ ಅಭ್ಯಾಸದ ಹಾಳೆಗಳನ್ನು ಬಳಸಿಕೊಳ್ಳುವುದು.<br>➢ ಚಿಕ್ಕಚಿಕ್ಕ ಕಥಾಪುಸ್ತಕಗಳನ್ನು ಓದಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಸಾಮರ್ಥ್ಯಾಧಾರಿತ ಚಟುವಟಿಕೆಯನ್ನು ಮಾಡಿಸಿ ತರಗತಿಯಲ್ಲಿ ಪ್ರದರ್ಶಿಸುವುದು. | ಲಿಖಿತ ಸಾಹಿತ್ಯ ಕಥೆ, ಪುಸ್ತಕಗಳು, ಪಠ್ಯಪುಸ್ತಕಗಳು ಮತ್ತು ಸೂಚನಾ ಫಲಕಗಳನ್ನು ಓದುವರು. |
| 6 | 4. ಕಂದ (ಪದ್ಯ)<br>6. ಈಸೂರ ಸ್ವಗತ<br>11. ಜಾತ್ರೆ. | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಮಿಂಚುಪಟ್ಟಿಯ ಮುಖಾಂತರ ಪದಗಳನ್ನು/ವಾಕ್ಯಗಳನ್ನು ಬರೆಯುವಂತೆ ಪ್ರೇರೇಪಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಸಾಮರ್ಥ್ಯಾಧಾರಿತ ಚಟುವಟಿಕೆಯನ್ನು ಅಭ್ಯಾಸ ಮಾಡಿಸುವುದು.<br>➢ ಕ್ರಮವಲ್ಲದ ವಾಕ್ಯಗಳನ್ನು ನೀಡಿ ಅವುಗಳನ್ನು ಸರಿಯಾದ ಕ್ರಮದಲ್ಲಿ ಬರೆಯುವಂತೆ ಸೂಚಿಸುವುದು.<br>➢ ಒಂದು ಸನ್ನಿವೇಶವನ್ನು ನೋಡಿ ಕೊಟ್ಟಿರುವ ಪದಗಳನ್ನು ಬಳಸಿ ವಾಕ್ಯ ರಚಿಸಿ ತರಗತಿಯಲ್ಲಿ ಓದುವಂತೆ ಸೂಚಿಸುವುದು. | ಅಕ್ಷರಗಳನ್ನು, ಪದಗಳನ್ನು ಮತ್ತು ವಾಕ್ಯಗಳನ್ನು ಸ್ವತಂತ್ರವಾಗಿ ಬರೆಯುವರು. |

ವಿಷಯ: ಪ್ರಥಮ ಭಾಷೆ ಕನ್ನಡ (ಕಲಿನಲಿ) ತರಗತಿ – 4

| ಕ್ರಸಂ. | ಕಲಿಕಾ ಫಲಗಳು |
|---|---|
| 1 | ಪರಿಚಿತ ಮತ್ತು ಅಪರಿಚಿತ ಸನ್ನಿವೇಶಗಳ ಸಂಭಾಷಣೆಯನ್ನು ಅರ್ಥಮಾಡಿಕೊಳ್ಳುವರು. |
| 2 | ವಾಸ್ತವಿಕ ಜೀವನದ ಸನ್ನಿವೇಶಗಳನ್ನು ಗುರುತಿಸಿ ಪಠ್ಯಗಳಿಗೆ ಅನ್ವಯಿಸುವರು |
| 3 | ಪರಿಚಿತ ಮತ್ತು ಅಪರಿಚಿತ ವಿಷಯಗಳಲ್ಲಿನ ಸಮಸ್ಯೆಗಳ ಕುರಿತು ಮಾತನಾಡುವರು |
| 4 | ಪಠ್ಯ ಮತ್ತು ಆಡುಭಾಷೆಗಳ ನಡುವಿನ ವ್ಯತ್ಯಾಸವನ್ನು ಗುರುತಿಸಿ ಏಕೆ? ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರಿಸುವರು |
| 5 | ವಾರ್ತಾ ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ, ನಾಮಫಲಕಗಳಲ್ಲಿನ ಅಕ್ಷರಗಳನ್ನು ಹಾಗೂ ಮುದ್ರಿತ ಸಾಹಿತ್ಯವನ್ನು ಓದುವರು. |
| 6 | ಶುದ್ಧ ವಾಕ್ಯಗಳನ್ನು ಸರಿಯಾದ ಲೇಖನ ಚಿಹ್ನೆಗಳೊಂದಿಗೆ ಬರೆಯುವರು. |

| ಕ್ರ.ಸಂ. | ಶೀರ್ಷಿಕೆ/ಕಲಿಕಾಂಶ | ಕಲಿಕಾ ಪ್ರಕ್ರಿಯೆ | ಸಾಧಿಸಬಹುದಾದ ಕಲಿಕಾ ಫಲ |
|---|---|---|---|
| 1 | 9. ಮಹಿಳಾ ದಿನಾಚರಣೆ<br>12. ಪ್ರವಾಸ ಹೋಗೋಣ<br>13. ಚಿತ್ರಕಲೆ (ಪದ್ಯ) | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ವಿವರಿಸಲು ಬಳಸಿಕೊಳ್ಳುವುದು.<br>➢ ಸಾಮೂಹಿಕವಾಗಿ/ವೈಯಕ್ತಿಕವಾಗಿ ಪದ್ಯಗಳನ್ನು ಹಾಡಲು ಪ್ರೇರೇಪಿಸುವುದು.<br>➢ ಅಭ್ಯಾಸದ ಹಾಳೆಗಳನ್ನು ಬಳಸಿಕೊಳ್ಳುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಸಂಭಾಷಣಾ ಮಾದರಿ ಪಾಠಗಳನ್ನು ಅಭಿನಯಿಸುವಂತೆ ಪ್ರೇರೇಪಿಸುವುದು.<br>➢ ಪರಿಚಿತ/ಅಪರಿಚಿತ ಸನ್ನಿವೇಶಗಳ ಕುರಿತು ಮಾತನಾಡಲು ಅವಕಾಶ ಕಲ್ಪಿಸುವುದು.<br>➢ ಪದ್ಯದ ಸಾರಾಂಶವನ್ನು ಮಕ್ಕಳು ತಮ್ಮ ಮಾತುಗಳಲ್ಲಿ ಹೇಳಲು ಪ್ರೇರೇಪಿಸುವುದು. | ಪರಿಚಿತ ಮತ್ತು ಅಪರಿಚಿತ ಸನ್ನಿವೇಶಗಳ ಸಂಭಾಷಣೆಯನ್ನು ಅರ್ಥಮಾಡಿಕೊಳ್ಳುವರು |
| 2 | 1. ಕನ್ನಡಮ್ಮನ ಹರಕೆ (ಪದ್ಯ)<br>16. ಕನಸುಗಾರ ಕಲಾಂ | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಅಭ್ಯಾಸದ ಹಾಳೆಗಳನ್ನು ಬಳಸಿಕೊಳ್ಳುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಬಳಸಿಕೊಳ್ಳುವುದು.<br>➢ ಪದ್ಯವನ್ನು ರಾಗಬದ್ಧವಾಗಿ ಹಾಡಲು ಪ್ರೋತ್ಸಾಹಿಸುವುದು.<br>➢ ತಮ್ಮ ಸುತ್ತಲಿನ ಅನುಭವಗಳನ್ನು ಲಿಖಿತ/ಮೌಖಿಕವಾಗಿ ಅಭಿವ್ಯಕ್ತಗೊಳಿಸಲು ಅವಕಾಶ ಕಲ್ಪಿಸುವುದು.<br>➢ ಕನ್ನಡ ಭಾಷೆಯ ಹಿರಿಮೆಯನ್ನು ಬಿಂಬಿಸುವ ಹಾಡುಗಳನ್ನು ಸಂಗ್ರಹಿಸಿ ಹಾಡಲು ಪ್ರೇರೇಪಿಸುವುದು. | ವಾಸ್ತವಿಕ ಜೀವನದ ಸನ್ನಿವೇಶಗಳನ್ನು ಗುರುತಿಸಿ ಪಠ್ಯಗಳಿಗೆ ಅನ್ವಯಿಸುವರು |
| 3 | 05. ಅಜ್ಜಿಯ ತೋಟದಲ್ಲೊಂದು ದಿನ<br>17. ಕಾಡಿನಲ್ಲೊಂದು ಸ್ಪರ್ಧೆ | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ವಿವರಿಸಲು ಬಳಸಿಕೊಳ್ಳುವುದು.<br>➢ ವಿವಿಧ ಸನ್ನಿವೇಶ/ಘಟನೆ/ಕುರಿತು ತಾರ್ಕಿಕವಾಗಿ ಯೋಚಿಸಲು ಅವಕಾಶ ಕಲ್ಪಿಸುವುದು. | ಪರಿಚಿತ ಮತ್ತು ಅಪರಿಚಿತ ವಿಷಯಗಳಲ್ಲಿನ |

| | | | |
|---|---|---|---|
| | | ➢ ಅಭ್ಯಾಸದ ಹಾಳೆಗಳನ್ನು ಬಳಸಿಕೊಳ್ಳುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br>➢ ಚರ್ಚೆಯ ಮೂಲಕ ತಮ್ಮ ಸುತ್ತಲಿನ ಪರಿಸರದಲ್ಲಿ ಕಂಡುಬರುವ ಸಮಸ್ಯೆಗಳ ಕುರಿತು ವ್ಯಕ್ತಿಪಡಿಸಲು ಅವಕಾಶ ಕಲ್ಪಿಸುವುದು. ಉದಾ:- ಪರಿಸರ ಮಾಲಿನ್ಯ, ಮೂಲಭೂತ ಸೌಲಭ್ಯಗಳು. | ಸಮಸ್ಯೆಗಳ ಕುರಿತು ಮಾತನಾಡುವರು |
| 4 | 4. ಮಳೆ (ಪದ್ಯ)<br>7. ಬೀಸೋ ಕಲ್ಲಿನ ಪದ್ಯ<br>14. ಹುತಾತ್ಮ ಬಾಲಕ<br>15. ದುಡಿಮೆಯ ಗರಿಮೆ (ಪದ್ಯ) | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಸಾಮೂಹಿಕವಾಗಿ/ವೈಯಕ್ತಿಕವಾಗಿ ಪದ್ಯವನ್ನು ಹಾಡಲು ಪ್ರೇರೇಪಿಸುವುದು.<br>➢ ಆಡು ಭಾಷೆ/ಗ್ರಾಂಥಿಕ ಭಾಷೆಯ ವ್ಯತ್ಯಾಸವನ್ನು ತಿಳಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br>➢ ಆಡು ಭಾಷೆಯ ಪದಗಳ ಸರಿಯಾದ ರೂಪ ಪರಿಚಯಿಸಿ ಬಳಕೆಯ ಅಭ್ಯಾಸ ಮಾಡಿಸುವುದು<br>➢ ಸೂಕ್ತ ಸನ್ನಿವೇಶಕ್ಕೆ ಅನುಗುಣವಾಗಿ ಪದಗಳನ್ನು ಬಳಸಲು ಅವಕಾಶ ಕಲ್ಪಿಸುವುದು.<br>➢ ಪಠ್ಯೇತರ ವಿಷಯ ಸಾಮಗ್ರಿಗಳನ್ನು ಓದಿ ಏಕೆ? ಹೇಗೆ? ಎಂಬ ಪ್ರಶ್ನೆಗಳಿಗೆ ಲಿಖಿತವಾಗಿ /ಮೌಖಿಕವಾಗಿ ಉತ್ತರಿಸುವುದು. | ಪಠ್ಯ ಮತ್ತು ಆಡುಭಾಷೆಗಳ ನಡುವಿನ ವ್ಯತ್ಯಾಸವನ್ನು ಗುರುತಿಸಿ ಏಕೆ? ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರಿಸುವರು |
| 5 | 2. ಬುದ್ಧಿವಂತ ರಾಮಕೃಷ್ಣ<br>6. ದೊಡ್ಡವರು ಯಾರು?<br>8. ತಾಯಿಗೊಂದು ಪತ್ರ | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಸಾಮೂಹಿಕವಾಗಿ/ವೈಯಕ್ತಿಕವಾಗಿ ಪದ್ಯಗಳನ್ನು ಹಾಡಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br>➢ ಪತ್ರಿಕೆ/ಪತ್ರಿಕೆಗಳಲ್ಲಿ ಪ್ರಕಟವಾಗುವ ಮಕ್ಕಳ ಕಥೆಗಳನ್ನು ಓದಿಸುವುದು.<br>➢ ಪತ್ರಿಕೆಗಳನ್ನು ವರದಿಯಂತೆ ತರಗತಿಯಲ್ಲಿ ಓದಿಸಲು ಕ್ರಮವಹಿಸುವುದು.<br>➢ ಮಕ್ಕಳ ಮಟ್ಟಕ್ಕನುಗುಣವಾಗಿ ಗ್ರಂಥಾಲಯದಲ್ಲಿರುವ ಪುಸ್ತಕಗಳನ್ನು ನೀಡಿ ತರಗತಿಯಲ್ಲಿ ಓದಿಸುವುದು.<br>➢ ವಿವಿಧ ಸ್ಥಳಗಳಲ್ಲಿನ ನಾಮಫಲಕ/ಸೂಚನಾ ಫಲಕಗಳನ್ನು ಓದಿ ಸಂಗ್ರಹಿಸುವುದು. | ವಾರ್ತಾ ಪತ್ರಿಕೆಗಳಲ್ಲಿ, ನಿಯತಕಾಲಿಕೆಗಳಲ್ಲಿ, ನಾಮಫಲಕಗಳಲ್ಲಿನ ಅಕ್ಷರಗಳನ್ನು ಹಾಗೂ ಮುದ್ರಿತ ಸಾಹಿತ್ಯವನ್ನು ಓದುವರು |
| 6 | 3. ವೀರ ಮಾತೆ ಜೀಜಾಬಾಯಿ<br>10. ಸರ್ವಜ್ಞನ ತ್ರಿಪದಿಗಳು (ಪದ್ಯ)<br>11. ವೀರ ಅಭಿಮನ್ಯು | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಸಾಮೂಹಿಕವಾಗಿ/ವೈಯಕ್ತಿಕವಾಗಿ ಪದ್ಯಗಳನ್ನು ಹಾಡಲು ಪ್ರೇರೇಪಿಸುವುದು.<br>➢ ಲೇಖನ ಚಿಹ್ನೆಗಳನ್ನು ವಾಕ್ಯಗಳೊಂದಿಗೆ ಪರಿಚಯಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br>➢ ಅಭ್ಯಾಸ ಹಾಳೆಗಳನ್ನು ನೀಡಿ ಚಟುವಟಿಕೆ ಮಾಡಿಸುವುದು.<br>➢ ವಾಕ್ಯಗಳನ್ನು ನಕಲು ಮಾಡಿಸುವುದು.<br>➢ ಉಕ್ತಲೇಖನ ಬರೆಸುವುದು.<br>➢ ಪತ್ರ ಲೇಖನ ಮತ್ತು ಪ್ರಬಂಧ ಲೇಖನ ಚಟುವಟಿಕೆ ಮಾಡಿಸುವುದು. | ಶುದ್ಧ ವಾಕ್ಯಗಳನ್ನು ಸರಿಯಾದ ಲೇಖನ ಚಿಹ್ನೆಗಳೊಂದಿಗೆ ಬರೆಯುವರು |

ವಿಷಯ: ಪ್ರಥಮ ಭಾಷೆ ಕನ್ನಡ (ಕಲಿನಲಿ) ತರಗತಿ – 5

| ಕ್ರ.ಸಂ. | ಕಲಿಕಾ ಫಲಗಳು |
|---|---|
| 1 | ಅಪರಿಚಿತ ಸಂಭಾಷಣೆ, ಚರ್ಚೆ, ನಾಟಕಗಳನ್ನು ಅರ್ಥಮಾಡಿಕೊಂಡು ಇವುಗಳಲ್ಲಿ ಭಾಗವಹಿಸುವರು. |
| 2 | ಗೊತ್ತಿರುವ ಪರಿಕಲ್ಪನೆಗಳ ಮೇಲಿನ ಪ್ರಶ್ನೆಗಳಿಗೆ ಕಾರಣಗಳನ್ನು ಕೊಟ್ಟು ಉತ್ತರಿಸುವರು. |
| 3 | ಆಡುಭಾಷೆ ಹಾಗೂ ಲಿಖಿತ ಭಾಷೆಯನ್ನು ಬಳಸಿ ಹೊಸ ವಿಷಯಗಳನ್ನು ವಿವರಿಸುವರು |
| 4 | ಕರಪತ್ರಗಳು, ಕಥೆಗಳು, ಭಿತ್ತಿಪತ್ರ ಇತ್ಯಾದಿಗಳ ಮೇಲೆ ಬರೆದ ಹಾಗೂ ಮುದ್ರಿತ ಸಾಹಿತ್ಯವನ್ನು ಓದುವರು. |
| 5 | ಕಥೆಗಳನ್ನು, ಪದ್ಯಗಳನ್ನು ರಚಿಸುವರು ಮತ್ತು ಬರೆಯುವರು |
| 6 | ಅಪರಿಚಿತ ವಿಷಯಗಳ ಮೇಲೆ ಪತ್ರಗಳನ್ನು ಮತ್ತು ಪ್ರಬಂಧಗಳನ್ನು ಬರೆಯುವರು. |

| ಕ್ರ.ಸಂ. | ಶೀರ್ಷಿಕೆ/ಕಲಿಕಾಂಶ | ಕಲಿಕಾ ಪ್ರಕ್ರಿಯೆ | ಸಾಧಿಸಬಹುದಾದ ಕಲಿಕಾ ಫಲ |
|---|---|---|---|
| 1 | 2. ನದಿಯ ಅಳಲು<br>4. ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ (ಪದ್ಯ) | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಸಾಮೂಹಿಕವಾಗಿ/ವೈಯಕ್ತಿಕವಾಗಿ ಪದ್ಯವನ್ನು ಹಾಡಲು ಪ್ರೇರೇಪಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಮತ್ತು ವ್ಯಾಕರಣ ಮಾಹಿತಿಯನ್ನು ಅಭ್ಯಾಸ ಮಾಡಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ನಾಟಕ, ಸಂಭಾಷಣಾ ಮಾದರಿ ಪಾಠಗಳನ್ನು ವಿದ್ಯಾರ್ಥಿಗಳು ಅಭಿನಯಿಸುವಂತೆ ಪ್ರೇರೇಪಿಸುವುದು.<br>➢ ಅಭ್ಯಾಸದ ಹಾಳೆಗಳನ್ನು ಬಳಸಿಕೊಳ್ಳುವುದು.<br>➢ ಘಟನೆ, ಸನ್ನಿವೇಶ, ವಿಷಯ, ಚಿತ್ರ ಸರಣಿ ಇವುಗಳ ಬಗ್ಗೆ ಮಾತನಾಡಲು ಅವಕಾಶ ಕಲ್ಪಿಸುವುದು.<br>➢ ಪದ್ಯದ ಸಾರಾಂಶವನ್ನು ಮಕ್ಕಳು ತಮ್ಮ ಮಾತುಗಳಲ್ಲಿ ಹೇಳಲು ಪ್ರೇರೇಪಿಸುವುದು. | ಅಪರಿಚಿತ ಸಂಭಾಷಣೆ, ಚರ್ಚೆ, ನಾಟಕಗಳನ್ನು ಅರ್ಥಮಾಡಿಕೊಂಡು ಇವುಗಳಲ್ಲಿ ಭಾಗವಹಿಸುವರು |
| 2 | 2. ಸ್ವಾತಂತ್ರ್ಯ ಹಣತೆ (ಪದ್ಯ)<br>5. ಕರಡಿಯ ಕುಣಿತ (ಪದ್ಯ)<br>6. ಬೇವು ಬೆಲ್ಲದೊಳಿಡಲೇನು ಫಲ (ಪದ್ಯ)<br>7. ಮಗುವಿನ ಮೊರೆ (ಪದ್ಯ) | ➢ ಪಠ್ಯ ಪುಸ್ತಕದಲ್ಲಿರುವ ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಪದ್ಯಗಳಲ್ಲಿರುವ ಕವಿಯ ಆಶಯ ಭಾವವನ್ನು ಅರ್ಥೈಸುವುದು.<br>➢ ಸಾಮೂಹಿಕವಾಗಿ/ವೈಯಕ್ತಿಕವಾಗಿ ಪದ್ಯವನ್ನು ಹಾಡಲು ಪ್ರೇರೇಪಿಸುವುದು.<br>➢ ಅಭ್ಯಾಸದ ಹಾಳೆಗಳನ್ನು ಬಳಸಿಕೊಳ್ಳುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಮತ್ತು ವ್ಯಾಕರಣ ಮಾಹಿತಿಯನ್ನು ಅಭ್ಯಾಸ ಮಾಡಿಸುವುದು.<br>➢ ತನ್ನ ಸುತ್ತಮುತ್ತಲಿನ ಘಟನೆ, ಸನ್ನಿವೇಶ, ಪರಿಸರ, ರೂಢಿ–ಸಂಪ್ರದಾಯ, ವಿವಿಧ ಆಚರಣೆಗಳ ಬಗ್ಗೆ ಕಾರಣ ಸಹಿತ ವಿವರಿಸುವುದು.<br>➢ ಪದ್ಯದ ಸಾರಾಂಶವನ್ನು ಮಕ್ಕಳು ತಮ್ಮ ಮಾತುಗಳಲ್ಲಿ ಹೇಳಲು/ಬರೆಯಲು ಪ್ರೇರೇಪಿಸುವುದು. | ಗೊತ್ತಿರುವ ಪರಿಕಲ್ಪನೆಗಳ ಮೇಲಿನ ಪ್ರಶ್ನೆಗಳಿಗೆ ಕಾರಣಗಳನ್ನು ಕೊಟ್ಟು ಉತ್ತರಿಸುವರು |
| 3 | 1. ಒಟ್ಟಿಗೆ ಬಾಳುವ ಆನಂದ | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು. | ಆಡುಭಾಷೆ ಹಾಗೂ |

| | | | |
|---|---|---|---|
| | 1. ಹುತ್ತರಿಯ ಹಾಡು (ಪದ್ಯ)<br>8. ಮೂಡಲ ಮನೆ (ಪದ್ಯ)<br>9. ಭುವನೇಶ್ವರಿ (ಪದ್ಯ) | ➢ ಮಕ್ಕಳಿಗೆ ಗೊತ್ತಿರುವ ಕಥೆ/ಸನ್ನಿವೇಶ/ ಘಟನೆಗಳ ಬಗ್ಗೆ ನಿರರ್ಗಳವಾಗಿ/ಸಹಜವಾಗಿ ಮಾತನಾಡುವಂತೆ ಅಭ್ಯಾಸ ಮಾಡಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br>➢ ಅಭ್ಯಾಸದ ಹಾಳೆಗಳನ್ನು ವೈಯಕ್ತಿಕವಾಗಿ ಪೂರ್ಣಗೊಳಿಸುವುದು.<br>➢ ಶಾಲಾ ಸನ್ನಿವೇಶದಲ್ಲಿ ಮಕ್ಕಳ ಮಾತುಗಾರಿಕೆ ಗಮನಿಸುವುದು, ಅವಶ್ಯವಿದ್ದಲ್ಲಿ ತಿದ್ದುವುದು.<br>➢ ಪದ್ಯ/ಗದ್ಯದ ಸಾರಾಂಶವನ್ನು ಅವರದೇ ಮಾತುಗಳಲ್ಲಿ ಅಭಿವ್ಯಕ್ತಗೊಳಿಸಲು ಅವಕಾಶ ಕಲ್ಪಿಸುವುದು. | ಲಿಖಿತ ಭಾಷೆಯನ್ನು ಬಳಸಿ ಹೊಸ ವಿಷಯಗಳನ್ನು ವಿವರಿಸುವರು |
| 4 | 3. ನಮ್ಮ ಮಾತು ಕೇಳಿ<br>4. ಸುಳ್ಳು ಹೇಳಬಾರದು | ➢ ಪಠ್ಯ ಪುಸ್ತಕದಲ್ಲಿರುವ ಗದ್ಯಗಳನ್ನು ಬಳಸಿಕೊಳ್ಳುವುದು.<br>➢ ಕರಪತ್ರ, ಭಿತ್ತಿಪತ್ರ, ನಿಯತಕಾಲಿಕೆ, ಗ್ರಂಥಾಲಯದ ಪುಸ್ತಕಗಳು, ವಾರ್ತಾ ಪತ್ರಿಕೆ, ಸೂಚನಾ ಫಲಕಗಳು ಇತ್ಯಾದಿಗಳನ್ನು ಓದಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br>➢ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಭಿತ್ತಿಪತ್ರಗಳನ್ನು ತಯಾರಿಸುವಂತೆ ಪ್ರೋತ್ಸಾಹಿಸುವುದು(ಯೋಜನೆ)<br>➢ ಕರಪತ್ರ, ಭಿತ್ತಿಪತ್ರಗಳ ಮಹತ್ವದ ಬಗ್ಗೆ ಮಾಹಿತಿ ಸಂಗ್ರಹಿಸುವುದು. | ಕರಪತ್ರಗಳು, ಕಥೆಗಳು, ಭಿತ್ತಿಪತ್ರ ಇತ್ಯಾದಿಗಳ ಮೇಲೆ ಬರೆದ ಹಾಗೂ ಮುದ್ರಿತ ಸಾಹಿತ್ಯವನ್ನು ಓದುವರು. |
| 5 | 8. ಧೀರ ಸೇನಾನಿ<br>9. ಸಂಗೊಳ್ಳಿ ರಾಯಣ್ಣ | ➢ ಪಠ್ಯ ಪುಸ್ತಕದಲ್ಲಿರುವ ಗದ್ಯಗಳನ್ನು ಬಳಸಿಕೊಳ್ಳುವುದು.<br>➢ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಮಾಹಿತಿ ನೀಡುವುದು.<br>➢ ಪರಿಸರ, ವ್ಯಕ್ತಿ, ವಸ್ತು, ಸನ್ನಿವೇಶ, ಘಟನೆ ಇವುಗಳಿಗೆ ಸಂಬಂಧಿಸಿದಂತೆ ಚಿಕ್ಕ ಚಿಕ್ಕ ಪದ್ಯ/ಕಥೆಗಳನ್ನು ಬರೆಯಲು ಮಾರ್ಗದರ್ಶನ ನೀಡುವುದು.<br>➢ ಚಿತ್ರ ಸರಣಿಗಳನ್ನು ನೀಡಿ ಚಿಕ್ಕಚಿಕ್ಕ ಕಥೆಗಳನ್ನು ರಚಿಸಿ ತರಗತಿಯಲ್ಲಿ ಹೇಳುವಂತೆ ಪ್ರೋತ್ಸಾಯಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br>➢ ಪ್ರಮುಖ ಸ್ವತಂತ್ರ್ಯ ಹೋರಾಟಗಾರರ ಹೆಸರುಗಳನ್ನು ಪಟ್ಟಿ ಮಾಡಿ ಮಾಹಿತಿ ಸಂಗ್ರಹಿಸಿ ಹಂಚಿಕೊಳ್ಳುವುದು. | ಕಥೆಗಳನ್ನು, ಪದ್ಯಗಳನ್ನು ರಚಿಸುವರು ಮತ್ತು ಬರೆಯುವರು |
| 6 | 7. ಮಲ್ಲಜ್ಜಿಯ ಮಳಿಗೆ<br>3. ವಚನಗಳು (ಪದ್ಯ)<br>6. ನಾನು ಮತ್ತು ಹುಂಚಿ ಮರ | ➢ ಪಠ್ಯ ಪುಸ್ತಕದಲ್ಲಿರುವ ಗದ್ಯ/ಪದ್ಯಗಳನ್ನು ಬಳಸಿಕೊಳ್ಳುವುದು.<br>➢ ಮಿಂಚುಪಟ್ಟಿಯ ಮುಖಾಂತರ ಲೇಖನ ಚಿಹ್ನೆಗಳ ಪರಿಚಯ.<br>➢ ಲೇಖನ ಚಿಹ್ನೆಗಳನ್ನು ಬಳಸಿರುವ ಸರಳ ವಾಕ್ಯಗಳ ಪರಿಚಯ.<br>➢ ಗದ್ಯ/ಪದ್ಯ ಕಲಿಕೆಯ ಸಂದರ್ಭದಲ್ಲಿ ಲೇಖನ ಚಿಹ್ನೆಗಳ ಬಳಕೆಯನ್ನು ಗಮನಿಸುವಂತೆ ತಿಳಿಸುವುದು.<br>➢ ಪತ್ರ ಬರವಣಿಗೆಯ ಸಂದರ್ಭದಲ್ಲಿ ಸಂಬೋಧನೆಯ ಪದಗಳ ಪರಿಚಯ ಮಾಡಿಸುವುದು.<br>➢ ಪಠ್ಯ ಪುಸ್ತಕದಲ್ಲಿರುವ ಅಭ್ಯಾಸ ಚಟುವಟಿಕೆಗಳನ್ನು ಮಾಡಿಸುವುದು.<br>➢ ವ್ಯಕ್ತಿ, ವಿಷಯ, ಸನ್ನಿವೇಶ, ಘಟನೆಗಳಿಗೆ ಸಂಬಂಧಿಸಿದಂತೆ ಕಿರು ಪ್ರಬಂಧ ರಚಿಸುವುದು.<br>➢ ವೈಯಕ್ತಿಕ ಪತ್ರಗಳನ್ನು ಬರೆದು ತರಗತಿಯಲ್ಲಿ ವಿದ್ಯಾರ್ಥಿಗಳು ಓದುವುದು. | ಅಪರಿಚಿತ ವಿಷಯಗಳ ಮೇಲೆ ಪತ್ರಗಳನ್ನು ಮತ್ತು ಪ್ರಬಂಧಗಳನ್ನು ಬರೆಯುವರು |